ಶ್ರೀ ಎಂ. ಕೆ. ಬೊಮ್ಮೇಗೌಡ.—ಇದಕ್ಕೆ ಕಾರಣ ವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೊಸ ಕೆರೆಗಳನ್ನು ಕಟ್ಟಲು ತಕ್ಕ ಜಾಗ ಮತ್ತು ನೀರು ಬೇಕು. ಇವಿಲ್ಲದೆ ಕಟ್ಟುವುದಕ್ಕಾಗುವುದಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಮೂರು ವರ್ಷಗಳನ್ನು ಪರೀಕ್ಷೆಯಲ್ಲೇ ಕಳೆದರೆ ನೀರಾವರಿ ಅಭಿವೃದ್ಧಿ ಕಾರ್ಯಗಳು ಹೇಗಾಗುತ್ತವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಷ್ಣರಾಜಪೇಟೆಯಲ್ಲಿ ನೀರಾವರಿ ಅಭಿವೃದ್ಧಿ ಕಾರ್ಯಗಳು ನಡೆದಿವೆ. 22 ಕೆರೆಗಳ ಜೀರ್ಣೋದ್ಧಾರಕ್ಕೆ ಮತ್ತು ದುರಸ್ತಿಗೆ 1,72,147 ರೂಪಾಯಿ ಖರ್ಚುಮಾಡಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—'ಬ' ಕ್ಲಾಜಿಗೆ ಉತ್ತರವಾಗಿ, "Seven tanks. The estimates in respect of six of these are under technical scrutiny in the department" ಎಂದಿದೆ ; ಇವು ಎಷ್ಟು ವರ್ಷಗಳಿಂದ ಟೆಕ್ನಿಕಲ್ ಸ್ಕ್ರೂಟಿನಿಯಲ್ಲಿವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1957ರಿಂದೀಚೆಗೆ ಏಳು ಕೆರೆಗಳನ್ನು ಹೊಸದಾಗಿ ಕಟ್ಟುವುದಕ್ಕೆ ಪರಿಶೀಲನೆ ನಡೆಸುತ್ತಿದ್ದೇವೆ. ಕೊತ್ತಮಾರ್ಯಹಳ್ಳಿ ಸೀಗೆ ಕಟ್ಟೆಗೆ 23,400 ರೂಪಾಯಿ ಅಂದಾಜುಮಾಡಿ, ಇನ್ನು ಆರು ಕೆರೆಗಳು, ಎಂದರೆ, ಬನವನಹಳ್ಳಿ ಕೆರೆ, ಮಂಚಗಾನಹಳ್ಳಿ ಕೆರೆ, ರಂಗನಾಥಪುರದ ಕೆರೆ, ದೊಬ್ಬನಕಟ್ಟೆ (ಬಲ್ಲೇನಹಳ್ಳಿಯ ಹತ್ತಿರ), ಕೊಪ್ಪಲ ಅಗರತಮ್ಮನಕಟ್ಟೆ, ಬಲ್ಲೇನಹಳ್ಳಿ ಗವಿರಂಗಸ್ವಾಮಿ ದೇವಸ್ಥಾನದ ಹತ್ತಿರವಿರುವ ಕೆರೆ, ಈ ಆರು ಕೆರೆಗಳನ್ನು ಹೊಸದಾಗಿ ಕಟ್ಟುವುದಕ್ಕೆ ನೀರಿದೆಯೆ ಎಂಬುದು ಪರಿಶೀಲನೆಯಾಗಬೇಕು. ಮೇಲಿನ ಕೆರೆಗಳಿಗೆ ಎಷ್ಟು ನೀರು, ಕೆಳಗಿನ ಕೆರೆಗಳಿಗೆ ಎಷ್ಟು ನೀರು ಸಿಕ್ಕುತ್ತದೆ ಎಂಬುದನ್ನು ಪರಿಶೀಲನೆಮಾಡಿ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಹಿಂದಿನ ಐದಾರು ವರ್ಷಗಳಿಂದ ಪರಿಶೀಲನೆಯಾಗುತ್ತಿರುವುದು ಈ ಆರು ಕೆರೆಗಳ ವಿಚಾರದಲ್ಲಿ ಮಾತ್ರವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—1957ರಿಂದೀಚೆಗೆ ಎಂದು ಕೇಳಿದ್ದೀರಿ, ಅದಕ್ಕೆ ಉತ್ತರವನ್ನು ಕೂಡಿಸ್ತೇನೆ ; ಹಿಂದಿನ ವಿಷಯಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರಕೊಡುತ್ತೇನೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಅಂದಾಜಾಗುತ್ತಿರುವ ಈ ಆರು ಕೆರೆಗಳ ಬಗ್ಗೆ ನೀರಿನ ಆನರೆ feasibility ಇದೆಲ್ಲ ತೀರ್ಮಾನವಾಗಿ ಇವುಗಳ, ರಿಕಾರ್ಡುಗಳನ್ನು "ಸ್ಕ್ರೂಟಿನಿ" ಎಂದು ಅನಾವಶ್ಯಕವಾಗಿ 'ಕ್ವೈರಿ' ಹಾಕಿ ಪಾಪಸು ಕಳುಹಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕ್ವೈರಿ ಹಾಕುವುದು ಅನಾವಶ್ಯಕವೆಂದು ಹೇಳಿದರೆ ಕಷ್ಟ ; ಅಗತ್ಯವಾದುದನ್ನು ಹಾಕಲೇಬೇಕಾಗುತ್ತದೆ. ಎಲ್ಲವನ್ನೂ ಪರೀಕ್ಷೆಮಾಡಿ ಆ ಮೇಲೆ ಕೆಲಸಮಾಡಬೇಕು. ಇಂಥಾ ಕಾಗದಪತ್ರಗಳು ಬಂದರೆ, ನೋಡಿ ಕ್ವೈರಿ ಹಾಕಿ ಕಳುಹಿಸುವುದು ಅನಿವಾರ್ಯ. ಕೆಳಗಿನ ಅಧಿಕಾರಿಗಳು ಮಾಡಿದ ಲೆಕ್ಕಾಚಾರ ಸರಿಯಾಗಿಲ್ಲವೆಂದು ಮೇಲ್ಪಟ್ಟ ಅಧಿಕಾರಿಗಳು ಹೇಳಿದರೆ, ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಹೀಗೆ ಒಂದು ಕೆರೆಯ ವಿಷಯದಲ್ಲಿ ಎರಡು ಮೂರು ಸಾರಿ 'ಕ್ವೈರಿ' ಹಾಕುವುದೇ ಸ್ವಭಾವವಾದರೆ ಏನುಮಾಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಭಾವವಲ್ಲ, ಆವಶ್ಯಕವಾದ ಪ್ರಶ್ನೆಗಳನ್ನು ಹಾಕುತ್ತಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಯಾವ ಜವಾಬ್ದಾರಿ ಎಕ್ಸಿಕ್ಯೂಟಿವ್ ಇಂಜಿನಿಯರು ಅಥವಾ ಸೂಪರಿಂಟೆಂಡಿಂಗ್ ಇಂಜಿನಿಯರು ಜವಾಬ್ದಾರಿ ತೆಗೆದುಕೊಳ್ಳದೆ ರಿಕಾರ್ಡುಗಳು ಮೇಲಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಹೋಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥಾದ್ದು ಬಂದಿಲ್ಲ ; ಪ್ರತಿಯೊಬ್ಬ ಅಧಿಕಾರಿಯೂ ತನಗೆ ಕೊಟ್ಟಿರುವ ಅಧಿಕಾರವನ್ನು ಸಂಪೂರ್ಣವಾಗಿ ಪ್ರಯೋಗಮಾಡಿ ಕೆಲಸಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಹಾಗೆ ಮಾಡದಿದ್ದರೆ, ಅದು ದಕ್ಷತೆಯ ಅಭಾವವನ್ನು ಸೂಚಿಸುತ್ತದೆಂದು ತಿಳಿಸಿದ್ದೇವೆ.

Drinking water wells in Channarayapatna Taluk.

*Q.—49. Sri N. G. NARASIMHE GOWDA (Sravanabelagola).—

Will the Government be pleased to state :—

(*a*) the number of places in Channarayapatna Taluk wherein there are no drinking water wells for the use of Adikarnatakas ;

(*b*) the number of places in the above Taluk wherein there are no drinking water wells for the use of people other than Adikarnatakas ;

(*c*) whether they intend to construct wells by the end of the next year at all the places wherein such facilities do not exist ?

A.—Sri T. SUBRAMANYA (Minister for Law, Labour and Local Self-Government).

(*a*) 70.

(*b*) 129.

(*c*) Government have planned to give a well to each village which does not have one at present, in the course of the next six years. The work in any taluk cannot be completed in one year.

ಶ್ರೀ ಎಸ್. ಜಿ. ನರಸಿಂಹೇಗೌಡ.—ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಆದಿಕರ್ನಾಟಕರ ಉಪಯೋಗಕ್ಕಾಗಿ ಇನ್ನೂ 70 ಬಾವಿಗಳು ಆಗಬೇಕಾಗಿವೆ ಎಂದು ಹೇಳಿದ್ದೀರಿ. ಆದರೆ ಇನ್ನೂ ಜಾಸ್ತಿ ಆಗಬೇಕಾಗಿವೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

†ಶ್ರೀ ಟಿ. ಸುಬ್ರಹ್ಮಣ್ಯ.—ಬಂದಿಲ್ಲ. ನಮಗೆ ಗೊತ್ತಿರುವ ಪ್ರಕಾರ, ಎಲ್ಲರಿಗೂ ಕೊಡಬೇಕಾದರೆ ಇನ್ನೂ 70 ಬಾವಿಗಳು ಬೇಕೆಂಬುದು, ಆದರೆ ಈಗ Untouchability Offences Act ಎಂಬ ಕೇಂದ್ರ ಸರ್ಕಾರದ ಕಾನೂನಾದ ಮೇರೆ ಹರಿಜನರಿಗೇ ಪ್ರತ್ಯೇಕವಾದ ಬಾವಿಗಳನ್ನು ಆದಷ್ಟು ಕಡಮೆ ಕೊಡುತ್ತಿದ್ದೇವೆ.

Sri C. J. MUCKANNAPPA.—Are we entitled to put questions on behalf of Harijans? The other day you ruled that unless one was a Harijan one should not put questions on their behalf. I therefore, want to know whether a non-Harijan is entitled to put supplementaries on behalf of Harijans

Mr. SPEAKER.—The Hon'ble member has not followed the Chair at all. When the next occasion arises, the Hon'ble member will understand.

ಶ್ರೀ ಎನ್. ಜಿ. ನರಸಿಂಹೇಗೌಡ.—ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 330 ಹಳ್ಳಿಗಳಿವೆ. ಈಗ ಈನ್ನೂ 129 ಬಾವಿಗಳನ್ನು ಕೊಡಬೇಕು ಎನ್ನುವುದರಿಂದ ಹೆಚ್ಚಿಗೆ ಬಾವಿಗಳನ್ನು ಚನ್ನರಾಯಪಟ್ಟಣದ ತಾಲ್ಲೂಕಿಗೆ ಕೊಟ್ಟಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ 330 ಹಳ್ಳಿಗಳಲ್ಲ, 362 ಹಳ್ಳಿಗಳಿವೆ. ನಾವು ಇನ್ನೂ 129 ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಕೊಡಬೇಕಾಗುತ್ತದೆ. ಅದರಲ್ಲಿ ಈ 70 ಹಳ್ಳಿಗಳು ಓವರ್‌ಲ್ಯಾಪ್‌ಆಗಿರಬಹುದು. ಒಂದು ಊರಿನಲ್ಲಿ ಹರಿಜನರಿಗೆ ಇರಬಹುದು, ಇತರರಿಗೆ ಇಲ್ಲದೆ ಇರಬಹುದು. ಕೆಲವುಕಡೆ ಹರಿಜನರಿಗೆ ಓವರ್‌ಲ್ಯಾಪ್ ಆಗಿರಬಹುದು. ನಮ್ಮ ಲೆಕ್ಕದ ಪ್ರಕಾರ 70 ಹರಿಜನ ಹಳ್ಳಿಗಳಿಗೆ ಬಾವಿ ಇಲ್ಲ.

ಶ್ರೀ ಎನ್. ಜಿ. ನರಸಿಂಹೇ ಗೌಡ.—(c) ಕ್ಲಾಜಿಗೆ ಉತ್ತರವಾಗಿ ಒಂದು ವರ್ಷದಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ ಎರಡು ವರ್ಷಗಳಲ್ಲಿ ಮುಗಿಸುವುದಕ್ಕೆ ತಕ್ಕ ಗ್ಯಾಂಟನ್ನು ಕೊಡುತ್ತೀರಾ?

ಶ್ರೀ ಟಿ.ಸುಬ್ರಹ್ಮಣ್ಯ.—ಮುಂದಿನ ಆರುವರ್ಷಗಳಲ್ಲಿ ಕಾಲಾವಧಿಯಲ್ಲಿ ಎಲ್ಲಾ ಊರುಗಳಲ್ಲಿ ಬಾವಿಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಚನ್ನರಾಯಪಟ್ಟಣದ ತಾಲ್ಲೂಕು ರೂರಲ್ ವಾಟರ್ ಸಪ್ಲೈ ಪಲ್ಸ್ ಕೊಡುವುದರಲ್ಲಿ ಹಿಂದುಳಿದಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಸ್ಟೇಟ್ ಆವರೇಜ್ ಸಾಕಾದಷ್ಟು ಬಂದಿದೆ. ಹಿಂದುಳಿದಿದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಜಿ. ನರಸಿಂಹೇಗೌಡ.—ಹಾಗಾದರೆ ಸರ್ಕಾರದ ಉದ್ದೇಶ ಎಷ್ಟು ವರ್ಷಗಳಲ್ಲಿ ಬಾವಿಗಳನ್ನು ಕೊಟ್ಟು ಮುಗಿಸಬೇಕೆಂದಿದೆ?

ಶ್ರೀ ಟಿ. ಸುಬ್ರಹ್ಮಣ್ಯ.—ಜೇಶದಾದ್ಯಂತ ಇರುವ ಬಾವಿಗಳ ಕೊರತೆಯನ್ನು ಆರುವರ್ಷಗಳಲ್ಲಿ ಒದಗಿಸಬೇಕು ಎಂದು ಅಭಿಪ್ರಾಯ ಇದೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಇಲ್ಲದ ಕಡೆ ಜಾಗ್ರತೆ ಕೊಡಬೇಕು. ಹೆಚ್ಚಿಗೆ ಇದ್ದ ಕಡೆ ನಿಧಾನವಾಗಿ ಕೊಡಬಹುದು ಅಲ್ಲವೆ?

ಶ್ರೀ ಟಿ. ಸುಬ್ರಹ್ಮಣ್ಯ.—ತಾಲ್ಲೂಕುವಾರು ನೋಡುವುದಕ್ಕಾಗುವುದಿಲ್ಲ. ಎಲ್ಲಿ ಅವಶ್ಯಕವಿದೆಯೋ ಅಲ್ಲಿಗೆ ಮೊದಲು ಕೊಟ್ಟು ಅವಶ್ಯಕವಿಲ್ಲವೋ ಅಲ್ಲಗೆ ಸ್ವಲ್ಪ ನಿಧಾನವಾಗಿ ಕೊಡುತ್ತೇವೆ.

ಶ್ರೀ ಕೆ.ಪಿ. ರೇವಣ್ಣಸಿದ್ದಪ್ಪ.—ಜನಗಳಿಗೆ ಜಾಗ್ರತೆ ನೀರು ಕುಡಿಸುವುದು ಸರ್ಕಾರದ ಧ್ಯೇಯವಲ್ಲವೇ?

ಶ್ರೀ ಟಿ. ಸುಬ್ರಹ್ಮಣ್ಯ.—ನೀರು ಕುಡಿಸುವುದು ನಮ್ಮ ಧ್ಯೇಯವಲ್ಲ. ಬಾಕಿ ಮಾನ್ಯ ಸದಸ್ಯರೂ ನೀರು ಕುಡಿಸಬಹುದು.

ಶ್ರೀ ಎನ್. ಜಿ. ನರಸಿಂಹೇಗೌಡ.—1960-61 ನೆಯ ಸಾಲಿಗೆ ಚನ್ನರಾಯಪಟ್ಟಣದ ತಾಲ್ಲೂಕಿಗೆ ಬಾವಿಗಳನ್ನು ತೆಗೆಸಲು ಹೆಚ್ಚಿಗೆ ಗ್ರಾಂಟ್ ಕೊಡುತ್ತೀರಾ?

ಶ್ರೀ ಟಿ. ಸುಬ್ರಹ್ಮಣ್ಯ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಜನಸಂಖ್ಯೆಗೆ ಅನುಗುಣವಾಗಿ, ಅವಶ್ಯಕತೆ ಗನುಗುಣವಾಗಿ, ಇರತಕ್ಕಂತ ದುಡ್ಡನ್ನು ಎಲ್ಲದಕ್ಕೂ ಸರಿಯಾಗಿ ಹಂಚಿ ಹಾಕುತ್ತೇವೆ.

Sri C. J. MUCKANNAPPA.—You were repeatedly telling us that within six years, the entire State would be supplied with drinking water wells. May I know, whether, with the speed at which you are proceeding with this work, are you going to fulfil this promise? Will the Government consider the aspect of giving a momentum to this work and see that drinking water wells are provided within six years?

Sri T. SUBRAMANYA.—Even with the present momentum I am hopeful of reaching the target within the Third Five-Year Plan. If my friend holds that the momentum is not sufficient, he is entitled to have that opinion.

ಶ್ರೀ ಎಂ. ರಾಮಪ್ಪ.—ಹರಿಜನರಿಗೆ ಪ್ರತ್ಯೇಕವಾದ ಬಾವಿಯನ್ನು ತೆಗೆಸಿಕೊಡುವ ಒಂದು ಯೋಜನೆ ಅಸ್ಪೃಶ್ಯತಾ ನಿವಾರಣೆಗೆ ಅಡ್ಡಿ ಪಡಿಸುವುದಿಲ್ಲವೆ?

ಅಧ್ಯಕ್ಷರು.—ಅದಕ್ಕೆ ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಎಂ. ರಾಮಪ್ಪ.—ರದಕ್ಕೋಸ್ಕರ ಈ ಯೋಜನೆಯನ್ನು ನಿಲ್ಲಿಸಿ ಬೇರೆ ಬಾವಿಗಳಿಗೆ ಅವರನ್ನು ಅಲೋಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೋ?

ಶ್ರೀ ಟಿ. ಸುಬ್ರಹ್ಮಣ್ಯ.—ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಸರ್ಕಾರದ ನೀತಿಯ ಪ್ರಕಾರ ಹರಿಜನರಿಗೆ ಬೇರೆ ಬಾವಿ ಕೊಡುವುದರಿಂದ ಅಸ್ಪೃಶ್ಯತೆಯನ್ನು ಪರಿಹಾರ ಮಾಡುವುದಕಾಗುವುದಿಲ್ಲ. ಸರ್ಕಾರದ ಪಾಲಿಸಿ ಅದಕ್ಕೆ ವಿರೋಧವಾಗಿದೆ.